**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು**

**ವಿರಾಜಪೇಟೆ**

***ಸಿ.ಸಿ. ಸಂಖ್ಯೆ : 348/2018***

**ಡಿಡಬ್ಲ್ಯೂ *2* ಜೆ ಮೈಕಲ್**

**ದಿನಾಂಕ : *02-03-2024* ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ : ಶ್ರೀ. ಡಿ ಸಿ ಡಿ ಆರೋಪಿಗಳ ಪರ ವಕೀಲರಿಂದ:-**

ನಾನು ಸಂಘದ ಕರ್ತವ್ಯಕ್ಕೆ ರಜಾ ಇದ್ದ ಸಮಯದಲ್ಲಿ ಗೋದಾಮಿನ ಕೆಲಸ ಅಂದರೆ ಸರಕನ್ನು ಸಂಗ್ರಹಿಸುವುದು ಹಾಗೂ ವಿತರಣೆ ಮಾಡುವ ಕೆಲಸವನ್ನು ಸೊಸೈಟಿಯ ಸಿ ಇ ಓ ಪಳಂಗಪ್ಪ, ಲೆಕ್ಕಿಗ ವಲಸರಾಜು ಹಾಗೂ ಗುಮಾಸ್ತ ನಾರಾಯಣ ರವರು ಮಾಡುತ್ತಿದ್ದರು. ನಾನು ಕೆಲಸ ಮಾಡಿಕೊಂಡಿರುವಾಗ ಯಾವುದೇ ಸ್ಟಾಕ್ ನಲ್ಲಿ ವ್ಯತ್ಯಾಸದಲ್ಲಿದ್ದಿರುವುದಿಲ್ಲ. ಸದರಿ ಸೊಸೈಟಿಯ ಗೋದಾಮಿನಲ್ಲಿ ಕರಿಮೆಣಸಿನ ಸಂಗ್ರಹಿಸಿಟ್ಟಿದ್ದ ಹೆಚ್ ಎಂ ಶಿವ ಹಾಗೂ ಸಿ ಕೆ ಬಶೀರ್ ರವರು ಗೋದಾಮಿನಲ್ಲಿ ಕರಿಮೆಣಸು ಕಾಣದೆ ಇರುವ ಬಗ್ಗೆ ಪೋಲಿಸರಿಗೆ ಯಾವುದೇ ಪುಕಾರನ್ನು ನೀಡಿರುವುದಿಲ್ಲ. ಸೊಸೈಟಿಯ ಅಧ್ಯಕ್ಷರಾದ ಸಿ ಎ ಸುಬ್ಬಯ್ಯ, ಸಿ ಇ ಓ ಪಳಂಗಪ್ಪ, ಲೆಕ್ಕಿಗ ವಲಸರಾಜು ಹಾಗೂ ಗುಮಾಸ್ತ ನಾರಾಯಣ ರವರು ನನ್ನನ್ನು ಈ ಪ್ರಕರಣದಲ್ಲಿ ಸಿಕ್ಕಿಸುವ ಸಲುವಾಗಿ ಅಧ್ಯಕ್ಷರಾದ ಸಿ ಎ ಸುಬ್ಬಯ್ಯನವರು ಕರಿಮೆಣಸು ಕಳ್ಳತನವಾಗಿದೆ ಎಂದು ಸುಳ್ಳು ಪುಕಾರನ್ನು ನೀಡಿರುತ್ತಾರೆ.

ಹೆಚ್ ಎಂ ಶಿವ ಹಾಗೂ ಸಿ ಕೆ ಬಶೀರ್ ರವರು ಪೋಲಿಸರಿಗೆ ಯಾವುದೇ ಪುಕಾರನ್ನು ನೀಡದೇ ಇದ್ದಿರುವುದರಿಂದ ಅಧ್ಯಕ್ಷರಾದ ಸಿ ಎ ಸುಬ್ಬಯ್ಯನವರು ಅವರ ಮೇಲೆ ಒತ್ತಡ ಹೇರಿ ಪುಕಾರನ್ನು ನೀಡಿದ ನಂತರ ಅವರುಗಳ ಹೇಳಿಕೆಯನ್ನು ನೀಡುವಂತೆ ಅವರಿಗೆ ಒತ್ತಾಯ ಮಾಡಿಸಿ ಹೇಳಿಕೆ ಕೊಡಿಸಿರುತ್ತಾರೆ. ನನಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಹಾಗೂ ನಾನು ಯಾವುದೇ ತಪ್ಪನ್ನು ಮಾಡಿರುವುದಿಲ್ಲ. ಆದ್ದರಿಂದ ನನ್ನನ್ನು ಈ ಪ್ರಕರಣದಿಂದ ಬಿಡುಗಡೆ ಮಾಡುವಂತೆ ಪ್ರಾರ್ಥಿಸುತ್ತೇನೆ.

ಈ ಹಂತದಲ್ಲಿ ಮಾನ್ಯ ಸ. ಸ. ಅ. ಪಾಟಿ ಸವಾಲಿಗೆ ಸಮಯಾವಕಾಶವನ್ನು ಕೋರಿದ್ದು, ಸಮಯಾವಕಾಶವನ್ನು ನೀಡಿ ಮುಂದೂಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-
(ಸಂತೋಷ ಕೊಠಾರಿ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ವಿರಾಜಪೇಟೆ.